**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 735/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.05**

**ದಿನಾಂಕಃ 24.01.2026** **ಸಿಡಬ್ಲ್ಯೂ.11**

| | |
|---|---|
| ಹೆಸರು | ಮಹಮದ್ ಖಲೀಲ್ |
| ತಂದೆ ಹೆಸರು | ಅಬ್ದುಲ್ ಖಲೀಲ್ |
| ವಯಸ್ಸು | 26 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ಮಲೆಬೆನ್ನೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ರವರ ಪರಿಚಯವಿಲ್ಲ. ಚಾಸಾ.12 ರವರ ಪರಿಚಯವಿಲ್ಲ. ಮೃತ ವಿಜಯಕುಮಾರ ರವರ ಪರಿಚಯವಿಲ್ಲ. ಆರೋಪಿ ನನ್ನ ಸ್ನೇಹಿತ. ಈಗ್ಗೆ 2 ವರ್ಷಗಳ ಹಿಂದೆ ಮಲೆಬೆನ್ನೂರಿನ ವೀರಭದ್ರೇಶ್ವರ ದೇವಸ್ಥಾನದ ಹತ್ತಿರ 2 ಬೈಕಗಳ ನಡುವೆ ಅಪಘಾತವಾಗಿತ್ತು. ಸದರಿ ಅಪಘಾತದ ದಿನ ಅಪಘಾತಕ್ಕೊಳಗಾದ ಆರೋಪಿಯು ಚಾಲನೆ ಮಾಡುತ್ತಿದ್ದ ಬೈಕಿನಲ್ಲಿ ನಾನು ಹಿಂದೆ ಕುಳಿತಿದ್ದೆ. ಸದರಿ ಬೈಕ ನನ್ನದು. ಸದರಿ ಸಂದರ್ಭದಲ್ಲಿ ನಾವು ಮಲೆಬೆನ್ನೂರಿನಿಂದ ಹರಿಹರಕ್ಕೆ ಹೊರಟಿದ್ದೆವು. ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಾಗಲಿಲ್ಲ. ಆರೋಪಿ ಬೈಕನ್ನು ನಿಧಾನಕ್ಕೆ ಓಡಿಸುತ್ತಿದ್ದರು. ಅಪಘಾತದಲ್ಲಿ ನನಗೆ ಕಣ್ಣಿಗೆ ಕೈಗೆ ಪೆಟ್ಟು ಬಿದ್ದಿತ್ತು. ಆರೋಪಿಗೂ ಸಹ ಸಣ್ಣ ಪುಟ್ಟ ಪೆಟ್ಟಾಗಿತ್ತು. ಇನ್ನೊಂದು ಬೈಕನಲ್ಲಿ ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಬೈಕ ಹೇಗೆ ಮತ್ತು ಯಾವ ಕಡೆ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಬೈಕಿನಲ್ಲಿ ಇದ್ದವರಿಗೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ನನ್ನನ್ನು ಯಾರೋ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆಸ್ಪತ್ರೆಗೆ ಯಾರು ಯಾರನ್ನು ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ಅಪಘಾತದ ಬಗ್ಗೆ ಯಾರು ದೂರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ಚಾಸಾ.12 ರವರಿಂದ ಕೆಎ 68 ಇ 9562 ನೇ ಪಲ್ಸರ್ ಬೈಕನ್ನು ನಾನು ಖರೀದಿ ಮಾಡಿದ್ದೆ ಆದರೆ ನೋಂದಣಿ ಮಾಡಿಸಿಕೊಂಡಿರಲಿಲ್ಲ ಎಂದರೆ ಸರಿ. ಸದರಿ ಬೈಕನಲ್ಲಿ ದಿಃ 21.01.2023 ರಂದು ಬೆಳಿಗ್ಗೆ 11.30 ಗಂಟೆಗೆ ನಾವು ಹರಿಹರಕ್ಕೆ ಹೋಗುತ್ತಿದ್ದಾಗ ಆರೋಪಿ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ಒಬ್ಬ ಬೈಕ ಸವಾರ ಎದುರುಗಡೆಯಿಂದ ಇಂಡಿಕೇಟರ್ ಹಾಕಿ ವೀರಭದ್ರೇಶ್ವರ ದೇವಸ್ಥಾನದ ಕಡೆಗೆ ತಿರುವು ತೆಗೆದುಕೊಳ್ಳುತ್ತಿರುವಾಗ ಆರೋಪಿ ಅವರ ಬೈಕಿಗೆ ಡಿಕ್ಕಿ ಪಡಿಸಿ ಅಪಘಾತ ಸಂಬವಿಸಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದಾಗ ಎರಡು ಬೈಕ ಸವಾರರು ಕೆಳಗೆ ಬಿದ್ದರು ಎಂದರೆ ಸರಿ. ನಮ್ಮ ಎದುರುಗಡೆ ಬರುತ್ತಿದ್ದ ಬೈಕನಲ್ಲಿ ಹಿಂದೆ ಕುಳಿತಿದ್ದವರ ಹೆಸರು ಹರೀಶ ಅವರಿಗೂ ಸಹ ಗಾಯವಾಗಿತ್ತು ಎಂದರೆ ಸರಿಯಲ್ಲ. ಹಾಗೂ ಬೈಕ ಸವಾರ ವಿಜಯಕುಮಾರನಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಆತನನ್ನು ಅಂಬುಲೆನ್ಸ ನಲ್ಲಿ ಮಲೆಬೆನ್ನೂರು ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಹೆಚ್ಚಿನ ಚಿಕಿತ್ಸೆಗೆ ದಾವಣಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯದಲ್ಲಿ ವಿಜಯಕುಮಾರ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ.1 ರವರು ಘಟನೆ ವಿಚಾರವಾಗಿ ಆರೋಪಿ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿ ನನ್ನ ಸ್ನೇಹಿತನಾದ್ದರಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ .**

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ